ಬಿಳಿತುಕೊಂಡು, ಇಷ್ಟೊಂದು ಗುರುತರವಾದ ಆರೋಪಗಳು ಸರ್ಕಾರದ ಮೇಲೆ ಇರುವಾಗ, ಪ್ರಮುಖ ಸಮಸ್ಯೆಗಳ ಬಗ್ಗೆ ಚರ್ಚೆ ಆಗಬೇಕಾದರೆ.....

ಅಧ್ಯಕ್ಷರು : ಕೆಲವು ಮೂಲಭೂತ ವಿಚಾರಗಳ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತಿತರ ಸ್ನೇಹಿತರು ಹಾಗು ಮಾನ್ಯ ಸಭಾ ನಾಯಕರು ಸಭೆಯ ಗಮನವನ್ನು ಸೆಳೆದಿದ್ದಾರೆ. ಸಂಸತ್ ಹೇಗೆ ತನ್ನ ವರ್ಷದ ಕಾರ್ಯಕ್ರಮವನ್ನು ನಿಯೋಜಿಸಿಕೊಳ್ಳುತ್ತದೋ ಅದೇ ರೀತಿ ನಮ್ಮ ಶಾಸನಸಭೆಯ ಕಾರ್ಯಕ್ರಮವನ್ನು ರೂಪಿಸಿಕೊಳ್ಳುವುದು ಅತಿ ಅವಶ್ಯಕ ಎನ್ನುವುದು ನಿರ್ವಿವಾದ. ಹಾಗಾದರೆ ಮಾತ್ರ ಶಾಸನಸಭೆಯ ನಡವಳಿಕೆಗಳು ಅರ್ಥಪೂರ್ಣವಾಗಬಹುದು. ಇದರ ಬಗ್ಗೆ ಸುಧಾರಣೆ ಆಗತ್ಯ ಅನಿವಾರ್ಯ. ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಇಲ್ಲವಾದರೆ ಶ್ರೀ ಸಾಮಾನ್ಯನಿಗೆ ಶಾಸನಸಭೆಗಳ ಬಗ್ಗೆ ಜಿಗುಪ್ಸೆ ಬರಬಹುದಾದಂಥ ಪರಿಸ್ಥಿತಿಯನ್ನು ನಾವು ಎದುರಿಸಬೇಕಾಗಬಹುದೇನೋ ಎನ್ನುವ ಅನುಮಾನ ಬಾರದ ವಿಧಿಯಿಲ್ಲ.

ಹಾಗೆಯೇ ಸಭೆಯನ್ನು ಕರೆಯುವ ಬಗ್ಗೆ ಸಭಾಧ್ಯಕ್ಷರ ಜೊತೆ ಔಪಚಾರಿಕವಾಗಿಯೋ ಅನೌಪಚಾರಿಕವಾಗಿಯೋ ಚರ್ಚೆ ಮಾಡುವುದರಿಂದ ಸಂಸದೀಯ ಪ್ರಜ್ಞಾವ್ಯವಸ್ಥೆಯ ಕಿಮ್ಮತ್ತು ಇನ್ನೂ ಹೆಚ್ಚಾಗಬಹುದೆಂಬ ಆಶಯವನ್ನು ವ್ಯಕ್ತಪಡಿಸಲು ನಾನು ಇಚ್ಛಿಸುತ್ತೇನೆ. ವಿಧಾನಸಭಾಧ್ಯಕ್ಷರುಗಳ ಸಮ್ಮೇಳನ ಕನಿಷ್ಠ ವರ್ಷಕ್ಕೆ 75ರಿಂದ 100 ದಿನಗಳ ಕಾಲ ಅಧಿವೇಶನ ನಡೆಯಬೇಕನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ ಹಾಗೂ ಅದನ್ನು ತೀರ್ಮಾನ ತೆಗೆದುಕೊಂಡಿದೆ. ಈ ಸಮಯದಲ್ಲಿ ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಪ್ರೊ. ನಂಜುಂಡಸ್ವಾಮಿಯವರು ಹೌಸ್ ಆಫ್ ಕಾಮನ್ಸ್‌ನ ನಡವಳಿಕೆಗಳ ಬಗ್ಗೆ ಸಭೆಯ ಮನ ಸೆಳೆದಿದ್ದಾರೆ. ಹೌಸ್ ಆಫ್ ಕಾಮನ್ಸ್, ಅದರ ಕಾರ್ಯವಿಧಾನ, ಅಲ್ಲಿಯ ಕಾರ್ಯವಿಧಾನ, ಅಲ್ಲಿನ ಪರಿಸರ, ಅಲ್ಲಿನ ಸಭೆಯ ನಡವಳಿಕೆಗಳು ಹಾಗೂ ಆ ಸಾರ್ವಜನಿಕ ಸೂಕ್ಷ್ಮ ಸಂವೇದನೆ ನಮ್ಮಲ್ಲಿ ಇದೆಯೇ ಎಂಬ ಬಗ್ಗೆ ನನಗೆ ದೊರೆತಿರುವ ಉತ್ತರ ದೊಡ್ಡ ಪ್ರಶ್ನಾರ್ಥಕ ಚಿಹ್ನೆ ಮಾತ್ರ. ನಾನು ಈ ಸದನದ ವಿನಮ್ರ ಸೇವಕ. ಮಾನ್ಯ ಸದಸ್ಯರ ಅನಿಸಿಕೆಗಳನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಅತಿ ಶೀಘ್ರದಲ್ಲಿ ಮತ್ತೆ ಈ ಸದನದ ಅಧಿವೇಶನವನ್ನೂ ಕರೆಯುವ ಸೂಚನೆಯನ್ನು ಮಾನ್ಯ ಸಭಾ ನಾಯಕರು ಈಗ ಸದನದ ಮುಂದೆ ಕೊಟ್ಟಿರುವ ಹಿನ್ನೆಲೆಯಲ್ಲಿ ಈ ವಿಚಾರಕ್ಕೆ ವಿದಾಯ ಹೇಳೋಣ.

ಶೀ ಬಿ.ಎಸ್. ಎಡಿಯೂರಪ್ಪ : ಇವರು 6 ತಿಂಗಳಿಗೆ ಮುಂಚೆ ಅಧಿವೇಶನ ಕರೆಯುವುದಿಲ್ಲ. ಉದ್ದೇಶಪೂರ್ವಕವಾಗಿ ಇನ್ನೂ 6 ತಿಂಗಳು ಅವರ ಉಳಿದುಕೊಳ್ಳುವುದಕ್ಕೆ ಮಾಡಿರುವ ತಂತ್ರ. ಮುಖ್ಯಮಂತ್ರಿಗಳು ತಮ್ಮ ಜೊತೇನೂ ಚರ್ಚೆ ಮಾಡಿಲ್ಲ.....

ಅಧ್ಯಕ್ಷರು : ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ.

(ಈ ಹಂತದಲ್ಲೇ ಬಿಜೆಪಿಯ ಮಾನ್ಯ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಕಾವೇರಿ ನ್ಯಾಯ ಮಂಡಲಿಯನ್ನು ಬಹಿಷ್ಕರಿಸಬೇಕೆಂದು ನಾವು ಸರ್ಕಾರಕ್ಕೆ ಪದೇ ಪದೇ ಒತ್ತಾಯ ಮಾಡಿದ್ದೇವೆ. ಮತ್ತು ನ್ಯಾಯ ಮಂಡಲಿ ಸದಸ್ಯರ ಬಗ್ಗೆ, ಸದಸ್ಯರ ಬಗ್ಗೆ, ಅವರ ನಡವಳಿಕೆ ಬಗ್ಗೆ ನಮ್ಮ ರಾಜ್ಯದ ಹೈಕೋರ್ಟಿನಲ್ಲಿ ಒಂದು ಕೇಸ್ ಕೂಡ ಇವತ್ತು ನಡೆಯುತ್ತಿದೆ. ಆದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು : ತಮ್ಮನ್ನು ಕರೆಯುತ್ತೇನೆ ಕೂತ್ಕೊಳ್ಳಿ. ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಮೂವ್ ಮಾಡಿಬಿಡಲಿ. ಆಮೇಲೆ ಕರೆಯುತ್ತೇನೆ. ಕಾಗದಪತ್ರಗಳನ್ನು ಇಟ್ಟುಬಿಡಲಿ.

(ಸಭೆಯ ಮುಂದಿಡಲಾದ ಪತ್ರಗಳು)

I. ಶ್ರೀ ಎಸ್. ಬಂಗಾರಪ್ಪ : (ಮುಖ್ಯಮಂತ್ರಿ) ರವರು : ಅಧ್ಯಕ್ಷರೇ ಭಾರತ ಸಂವಿಧಾನದ ಅನುಚ್ಛೇದ 213 (2)ನೇ ಕಲಮಿನ ಮೇರೆಗೆ ;